62

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಹೊ/07/2016-17. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಸಿದ್ದೇಶ ತಂದೆ ಲೇಟ್ ಟಿ.ಕೊಟ್ರಪ್ಪ<br>ಈರಣ್ಣನ ಗುಡಿ ಹತ್ತಿರ ಕೊಟ್ಟೂರು ಪಟ್ಟಣ<br>2)ಕೆ.ತಿಪ್ಪೇರುದ್ರಪ್ಪ ತಂದೆ ಲೇಟ್ ಅಜ್ಜಪ್ಪ<br>ಚಪ್ಪರದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ಚಪ್ಪರದಹಳ್ಳಿ ಗ್ರಾಮದ ಸನಂ 60/1. 88ಬಿ/1.. ವಿಸ್ತೀರ್ಣ 0-40. 0-30. ಎಕ್ರೆ ಜಮೀನುಗಳನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಚಪ್ಪರದಹಳ್ಳಿ ಗ್ರಾಮದ ಸನಂ 60/1. 88ಬಿ/1.. ವಿಸ್ತೀರ್ಣ 0-40. 0-30. ಎಕ್ರೆ ಜಮೀನುಗಳನ್ನು.ಸದರಿ ಗ್ರಾಮದ ಕೆ.ತಿಪ್ಪೇರುದ್ರಪ್ಪ ತಂದೆ ಲೇಟ್ ಅಜ್ಜಪ್ಪ ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಸಿದ್ದೇಶ ತಂದೆ ಲೇಟ್ ಟಿ.ಕೊಟ್ರಪ್ಪ ಇವರು ದಿನಾಂಕ 11-02-2016 ರ ಡಾಕ್ಯುಮೆಂಟ್ ನಂಬರ್: 3718/2015-16. ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳು ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಚಪ್ಪರದಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 14-02-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ನಮೂನೆ-21 ರಲ್ಲಿ ಸರ್.ನೇಮ ತಪ್ಪು ನಮೂದಾಗಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 17/2015-16. ದಿನಾಂಕ 13-03-2016 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 31-05-2016 ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಚಪ್ಪರದಹಳ್ಳಿ ಗ್ರಾಮದ ಸನಂ 60/1. 88ಬಿ/1.. ವಿಸ್ತೀರ್ಣ 0-40. 0-30. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಕೆ.ತಿಪ್ಪೇರುದ್ರಪ್ಪ ತಂದೆ ಲೇಟ್ ಅಜ್ಜಪ್ಪ ಇವರಿಂದ ದಿನಾಂಕ 11-02-2016 ರ ಡಾಕ್ಯುಮೆಂಟ್ ನಂಬರ್: 3718/2015-16. ರ ಪ್ರಕಾರ 65.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಸದರಿ ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವಾಗ ನಮೂನೆ-21 ರಲ್ಲಿ ಸಿದ್ದೇಶ ತಂದೆ ಲೇಟ್ ಟಿ.ಕೊಟ್ರಪ್ಪ ಎಂದು ನಮೂದಾಗುವ ಬದಲಾಗಿ ಸಿದ್ದೇಶ ತಂದೆ ಲೇಟ್ ಬಿ.ಕೊಟ್ರಪ್ಪ ಎಂದು ಸರ್ ನೇಮ ಬದಲಾಗಿದೆ. ಕಾರಣ ಸದರಿ ಕ್ರಯ ಪತ್ರ ಹಾಗೂ ನಮ್ಮ ಚುನಾವಣಾ ಗುರುತಿನ ಚೀಟಿಯಲ್ಲಿ ನಮೂದಾಗಿರುವಂತೆ ಸಿದ್ದೇಶ ತಂದೆ ಲೇಟ್ ಟಿ.ಕೊಟ್ರಪ್ಪ ಎಂದು ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಬಗ್ಗೆ ಕಂದಾಯ ಪರಿವೀಕ್ಷಕರು ಹಾಗೂ ಗ್ರಾಮಲೆಕ್ಕಿಗರು ಗ್ರಾಮದಲ್ಲಿ ಮರು ವಿಚಾರಣೆ ಮಾಡಲಾಗಿ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರಾದ ಸಿದ್ದೇಶ ತಂದೆ ಲೇಟ್ ಟಿ.ಕೊಟ್ರಪ್ಪ ಎಂದು ನಮೂದು ಮಾಡಲು ವರದಿ ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಚಪ್ಪರದಹಳ್ಳಿ ಗ್ರಾಮದ ಸನಂ 60/1. 88ಬಿ/1.. ವಿಸ್ತೀರ್ಣ 0-40. 0-30. ಎಕ್ರೆ ಜಮೀನುಗಳನ್ನು ದಿನಾಂಕ 11-02-2014 ರ ಡಾಕ್ಯುಮೆಂಟ್ ನಂಬರ್: 3718/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಸಿದ್ದೇಶ ತಂದೆ ಲೇಟ್ ಟಿ.ಕೊಟ್ರಪ್ಪ ಕೊಟ್ಟೂರು ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಚೇರಿ ಕಾರ್ಯಾಲಯರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸಿದ್ದೇಶ ತಂದೆ ಲೇಟ್ ಟಿ.ಕೊಟ್ರಪ್ಪ. ಈರಣ್ಣನ ಗುಡಿ ಹತ್ತಿರ ಕೊಟ್ಟೂರು ಪಟ್ಟಣ. ಕೆ.ತಿಪ್ಪೇರುದ್ರಪ್ಪ ತಂದೆ ಲೇಟ್ ಅಜ್ಜಪ್ಪ ಚಪ್ಪರದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.